ಓ ಎಸ್ ನಂ.282-2019

ಪಿ ಡಬ್ಲೂ-2

**ದಿಃ 01-04-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ-** ಪ್ರತಿವಾದಿ ಪರ ಶ್ರೀ ಕೆ ವಿ ಹೆಚ್ ವಕೀಲರಿಂದಃ

ನಾನು ವಾದಿಯ ಅಕ್ಕನ ಗಂಡ. ವಾದಿ ಈ ದಾವೆಯನ್ನು ರಂಗಾಪುರ ಕಾವಲು ಗ್ರಾಮದ ಸರ್ವೆ ನಂ.2 ರಲ್ಲಿ 2 ಎಕರೆಗೆ ಸಂಬಂದಿಸಿದಂತೆ ಹೂಡಿರುತ್ತಾರೆ. ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ನಮಗೆ ಯಾವುದೇ ಜಮೀನು ಇರುವುದಿಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ವಿಷಯ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳ ಹೆಸರಿಗೆ ಮಂಜೂರಾದ ಆದೇಶವನ್ನು ನೀಡಿದ ನಂತರ ಅವರೇ ಕಂದಾಯ ಪಾವತಿ ಮಾಡಿಕೊಂಡು ಹೋಗುತ್ತಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ.

ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಕಿಮ್ಮತ್ತು ಹಣ ಪಾವತಿ ಮಾಡಿರುವ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ದಿಃ 04-06-2007 ರ ಪಾಲು ಪಟ್ಟಿಯಂತೆ ಪ್ರತಿವಾದಿಗಳಿಬ್ಬರೂ ವಾದಿಗೆ ತಲಾ ಒಂದೊಂದು ಎಕರೆ ಜಮೀನನ್ನು ನೀಡಿರುತ್ತಾರೆ. ಸದರಿ ದಿನದಂದು ಒಂದೇ ಪಾಲುಪಟ್ಟಿಯನ್ನು ಬರೆದಿರುತ್ತಾರೆ. ದಿಃ 04-06-2007 ರಂದು ಯಾವುದೇ ಪಾಲುಪಟ್ಟಿಯಾಗಿರುವುಲ್ಲ ಎಂದು ಸೂಚಿಸುವುದು ಸರಿಯಲ್ಲ. ಸದರಿ ದಾಖಲೆಯನ್ನು ನಾನು ಮತ್ತು ವಾದಿ ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

ದಾವಾ ಸ್ವತ್ತು ಪ್ರತಿವಾದಿಗಳಿಗೆ ಮಾತ್ರ ಮಂಜೂರಾದಂತಹ ಆಸ್ತಿಯಾಗಿರುತ್ತದೆ ಎಂದರೆ ಸರಿ ವಾದಿ ನನ್ನ ಹೆಂಡತಿಯ ತಮ್ಮನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ..

**ಮರು ವಿಚಾರಣೆ ಃ-** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಸಾ ಓ ಹೇ ಕೇ ಸ ಇ ಒ**

(ಶ್ರೀ ಅಮರನಾಥ ಬಿ.ಎನ್)

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**

**ಅರಸೀಕೆರೆ.**

ಓ ಎಸ್ ನಂ.282-2019

ಪಿ ಡಬ್ಲೂ-2